# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ಇಲಾಖೆಯ ಬಿತ್ತನೆ ಬೀಜ ಪರಿಕರದ ಟೆಂಡರ್ ಆಹ್ವಾನ ಮತ್ತು ಟೆಂಡರ್ ಅಂಗೀಕಾರ ಪ್ರಾಧಿಕಾರಿಗಳಿಗೆ ಸೂಕ್ತ ತಾಂತ್ರಿಕ ಸಲಹೆಗಳನ್ನು ನೀಡಲು ತಜ್ಞರನ್ನು ನೇಮಿಸುವ ಬಗ್ಗೆ.**

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಕೃಇ 94 ಕೃರಾಗೊ 2016 ದಿ: 02.09.2016.

2. ಕೃಷಿ ಆಯುಕ್ತರವರ ಪ್ರಸ್ತಾವನೆ ಸಂಖ್ಯೆ: ಎಸ್‌ಎಫ್‌ಎಸ್-5/ದರ ನಿಗದಿ/2018-19 ದಿನಾಂಕ 11.03.2019.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ, ಕೃಷಿ ಇಲಾಖೆಯಲ್ಲಿ ವಿವಿಧ ಯೋಜನೆಯಡಿ ರೈತರಿಗೆ ಪೂರೈಕೆ ಮಾಡುತ್ತಿರುವ ಬಿತ್ತನೆ ಬೀಜಗಳ ದರ ಕರಾರು ನಿಗದಿಪಡಿಸುವ ಸಂಬಂಧ ಪ್ರಸ್ತುತ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಟೆಂಡರ್ ಆಹ್ವಾನ ಮತ್ತು ಟೆಂಡರ್ ಅಂಗೀಕಾರ ಪ್ರಾಧಿಕಾರಿಗಳಿಗೆ ಸೂಕ್ತ ತಾಂತ್ರಿಕ ಸಲಹೆಯನ್ನು ನೀಡಲು ನೆರವಾಗುವಂತೆ ಡಾ: ಐ.ಶಂಕರ್ ಗೌಡ, ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ರಾಯಚೂರು ಇವರನ್ನು ಏಕ ತಜ್ಞ ತಾಂತ್ರಿಕ ಸಲಹಾ ಸಮಿತಿಗೆ ನೇಮಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (2)ರ ಕೃಷಿ ಆಯುಕ್ತರವರ ಪ್ರಸ್ತಾವನೆಯಲ್ಲಿ, ಕೃಷಿ ಇಲಾಖೆಯಲ್ಲಿ ವಿವಿಧ ಯೋಜನೆಯಡಿ ರೈತರಿಗೆ ಪೂರೈಕೆ ಮಾಡುತ್ತಿರುವ ಬಿತ್ತನೆ ಬೀಜಗಳ ದರ ಕರಾರು ನಿಗದಿಪಡಿಸುವ ಸಂಬಂಧ ಪ್ರಸ್ತುತ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಟೆಂಡರ್ ಆಹ್ವಾನ ಮತ್ತು ಟೆಂಡರ್ ಅಂಗೀಕಾರ ಪ್ರಾಧಿಕಾರಿಗಳಿಗೆ ಸೂಕ್ತ ತಾಂತ್ರಿಕ ಸಲಹೆಯನ್ನು ನೀಡಲು ಡಾ: ಐ.ಶಂಕರ್ ಗೌಡ, ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ರಾಯಚೂರು ರವರ ನೇತೃತ್ವದಲ್ಲಿ ತಾಂತ್ರಿಕ ಸಲಹಾ ಸಮಿತಿಯನ್ನು ನೇಮಿಸಲಾಗಿದ್ದು, ಪ್ರಸ್ತುತ ಸದರಿಯವರು, ಡೀನ್ (ಪಿ.ಜಿ.ಎಸ್) ಆಗಿ ವರ್ಗಾವಣೆಗೊಂಡಿರುತ್ತಾರೆ. ಈ ಹುದ್ದೆಯು ಸಂಪೂರ್ಣ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದ್ದಾಗಿರುತ್ತದೆ. ಆದ್ದರಿಂದ, ಬಿತ್ತನೆ ಬೀಜಗಳ ದರ ನಿಗದಿ ಸಭೆಯಲ್ಲಿ ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವ, ಬೆಳೆ / ತಳಿಗಳ ಉತ್ಪಾದನೆ, ಅಭಿವೃದ್ಧಿಯಲ್ಲಿ ನಿರಂತರವಾಗಿ ಭಾಗವಹಿಸುವ ಹಾಗೂ ಈ ಬಗ್ಗೆ ಪ್ರಥಮ ಮಾಹಿತಿಯುಳ್ಳ ಮತ್ತು ರೈತ ಸಮುದಾಯದ ಜೊತೆ ನೇರ ಸಂಪರ್ಕವಿರುವ ಮಾರುಕಟ್ಟೆ ದರಗಳ ಬಗ್ಗೆ ಮಾಹಿತಿಯಿರುವ ಕೃಷಿ ಬೆಳೆಗಳ ಖರ್ಚು ವೆಚ್ಚಗಳ ಬಗ್ಗೆ ಮಾಹಿತಿ ಇರುವ ಸಂಶೋಧನಾ ನಿರ್ದೇಶಕರನ್ನು ನೇಮಿಸುವುದು ಸೂಕ್ತವಾಗಿರುತ್ತದೆ. ಆದ್ದರಿಂದ, ಡಾ: ವೈ.ಜಿ.ಷಡಾಕ್ಷರಿ, ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ರವರ ನೇತೃತ್ವದಲ್ಲಿ ಏಕ ತಜ್ಞ ತಾಂತ್ರಿಕ ಸಲಹಾ ಸಮಿತಿ ರಚಿಸಿ, ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಕೃಇ 38 ಕೃಮಸ 2019, ಬೆಂಗಳೂರು, ದಿನಾಂಕ 16-03-2019

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕೃಷಿ ಇಲಾಖೆಯಲ್ಲಿ ವಿವಿಧ ಯೋಜನೆಯಡಿ ರೈತರಿಗೆ ಪೂರೈಕೆ ಮಾಡುತ್ತಿರುವ ಬಿತ್ತನೆ ಬೀಜಗಳ ದರ ಕರಾರು ನಿಗದಿಪಡಿಸುವ ಸಂಬಂಧ ಪ್ರಸ್ತುತ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಟೆಂಡರ್ ಆಹ್ವಾನ ಮತ್ತು ಟೆಂಡರ್ ಅಂಗೀಕಾರ ಪ್ರಾಧಿಕಾರಿಗಳಿಗೆ ಸೂಕ್ತ ತಾಂತ್ರಿಕ ಸಲಹೆಯನ್ನು ನೀಡಲು ಡಾ: ಐ.ಶಂಕರ್ ಗೌಡ, ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ರಾಯಚೂರು ರವರ ತಾಂತ್ರಿಕ ಸಲಹಾ ಸಮಿತಿಯನ್ನು ಪರಿಷ್ಕರಿಸಿ ಡಾ: ವೈ.ಜಿ.ಷಡಾಕ್ಷರಿ, ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ರವರ ನೇತೃತ್ವದಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಏಕ ತಜ್ಞ ತಾಂತ್ರಿಕ ಸಲಹಾ ಸಮಿತಿಯನ್ನು ರಚಿಸಿ ಆದೇಶಿಸಿದೆ.

..2)

ಈ ಮೇಲೆ ತಿಳಿಸಿದ ಏಕ ತಜ್ಞ ತಾಂತ್ರಿಕ ಸಲಹಾ ಸಮಿತಿಯು ಈ ಕೆಳಕಂಡ ಅಂಶಗಳನ್ನು ಟೆಂಡರ್ ಅಂಗೀಕಾರ ಪ್ರಾಧಿಕಾರಕ್ಕೆ ಪರಾಮರ್ಶಿಸಿ ಶಿಫಾರಸ್ಸು ನೀಡುವಂತೆ ಆದೇಶಿಸಿದೆ ಹಾಗೂ ಸಮಿತಿ ನೀಡುವ ಶಿಫಾರಸ್ಸುಗಳನ್ನು ಕೃಷಿ ಇಲಾಖೆ ಕಡ್ಡಾಯವಾಗಿ ಪಾಲಿಸತಕ್ಕದ್ದು.

1. ಟೆಂಡರ್ ಪರಿಶೀಲನಾ ಸಮಿತಿಯು ತಾಂತ್ರಿಕ ಹಾಗೂ ವಾಣಿಜ್ಯ ಬಿಡ್ಡುಗಳನ್ನು ತೆರೆದು ಸಲ್ಲಿಸುವ ವರದಿಗಳನ್ನು ಪರಿಶೀಲಿಸಿ ಅದರ ಮೇಲೆ ಅಭಿಪ್ರಾಯ ನೀಡುವುದು ಹಾಗೂ ಗುಣಮಟ್ಟ ಮತ್ತು ದರ ಕರಾರು ಪರಾಮರ್ಶಿಸಿ, ಅಂಗೀಕಾರ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವುದು.
2. ಸಂಸ್ಥೆಗಳು ಕೋಟ್ ಮಾಡಿರುವ ದರಗಳನ್ನು ಮುಕ್ತ ಮಾರುಕಟ್ಟೆ ದರಗಳ ಜೊತೆ ಕೂಲಂಕಷವಾಗಿ ಪರಿಶೀಲಿಸಿ ರೈತರು ನೀಡಬೇಕಾದ ವಂತಿಗೆಯನ್ನು ಗಮನದಲ್ಲಿಟ್ಟುಕೊಂಡು ಬಿತ್ತನೆ ಬೀಜಗಳನ್ನು ಸ್ಪರ್ಧಾತ್ಮಕವಾಗಿ, ವೈಜ್ಞಾನಿಕವಾಗಿ ದರ ನಿರ್ಧರಿಸಿ ಅಂಗೀಕಾರ ಪ್ರಾಧಿಕಾರಕ್ಕೆ ಸೂಕ್ತ ಶಿಫಾರಸ್ಸು ಮಾಡುವುದು.
3. ಬಿತ್ತನೆ ಬೀಜ ವಿತರಣೆಗೆ ನೀಡಬಹುದಾದ ರಿಯಾಯಿತಿ ದರದ ಬಗ್ಗೆ ಶಿಫಾರಸ್ಸು ನೀಡುವುದು.
4. ಸರ್ಕಾರವು ಈ ಬಗ್ಗೆ ಅಗಿಂದಾಗ್ಗೆ ಸೂಚಿಸುವ ಅಂಶಗಳಿಗೆ ವರದಿ ನೀಡುವುದು.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

B S Nagarathnamma

(ಬಿ.ಎಸ್. ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)
16/3/19

ಗೆ:

1) ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು
2) ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು/ಧಾರವಾಡ/ರಾಯಚೂರು/ಶಿವಮೊಗ್ಗ
3) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ, ಬೀಜ ಭವನ, ಹೆಬ್ಬಾಳ, ಬೆಂಗಳೂರು
4) ಡಾ: ಐ.ಶಂಕರ್ ಗೌಡ, ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ರಾಯಚೂರು
5) ಡಾ: ವೈ.ಜಿ.ಷಡಾಕ್ಷರಿ, ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು
6) ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ, ಹೆಬ್ಬಾಳ, ಬೆಂಗಳೂರು
7) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು
8) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು
9) ಸರ್ಕಾರದ ಉಪ ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
10) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.